ಜನರು ನಮ್ಮನ್ನು ಏನು ತಿಳಿದುಕೊಳ್ಳುತ್ತಾರೆ, ನಮ್ಮ ಸದಸ್ಯರುಗಳ ಗತಿ ಏನಾಗಬೇಕು? ಮುಖ್ಯವಾದಂತಹ ವಿಷಯವನ್ನು ಪ್ರಸ್ತಾಪವನ್ನು ಮಾಡಬೇಕೆಂದು ತಾವು ಅವಕಾಶವನ್ನು ಕೇಳಿದ್ದೀರಿ, ನನ್ನ ಕರ್ತವ್ಯ ತಮ್ಮ ಜೊತೆಯಲ್ಲಿ ಸಹಕರಿಸಿಕೊಂಡು ಹೋಗಬೇಕು. ಈಗ ಈ ವಿಷಯದ ಬಗ್ಗೆ ಒಂದು ಗಂಟೆಗಳ ಕಾಲವಾಯಿತು. ಈಗ ಪ್ರಶ್ನೋತ್ತರದ ವೇಳೆಯ ಬದಲಾಗಿ, ಈ ವಿಷಯದ ಬಗ್ಗೆ ಚರ್ಚೆಯನ್ನು ಮಾಡಿ ಒಂದು ಗಂಟೆ ಕಳೆದು ಹೋಯಿತು. ಆ ಒಂದು ಗಂಟೆಯ ಉಳಿದಿದ್ದರೆ ಇನ್ನು 4 ಜನ ಸದಸ್ಯರಿಗೆ ಮಾತನಾಡಲು ಅವಕಾಶವನ್ನು ಕೊಡಬಹುದಾಗಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಿಮ್ಮ ಬಗ್ಗೆ ಬಹಳಷ್ಟು ಗೌರವ ಇದೆ. ನಾನಂತು ವಿರೋಧ ಪಕ್ಷಗಳ ಪರವಾಗಿ, ಬಹುಶಃ ಎಲ್ಲರೂ ಮೆಚ್ಚುವಂತಹ ರೀತಿಯಲ್ಲಿ ತಾವು ಸದನವನ್ನು ಅತ್ಯಂತ ಉತ್ತಮವಾಗಿ ನಡೆಸುತ್ತಿದ್ದೀರಿ, ಎಲ್ಲರಿಗೂ ಅವಕಾಶಗಳನ್ನು ಕೊಡುತ್ತಿದ್ದೀರಿ, ನಾನು ನಿಮಗೆ 100 ಬಾರಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು : ಸಹಕರಿಸಿದ್ದೀರಿ, ನಾನು ನಿಮ್ಮನ್ನು ಅಭಿನಂದಿಸುತ್ತಿದ್ದೇನೆ. ನನಗೆ ನಿಮ್ಮ ಬಗ್ಗೆ ಬಹಳ ಮೆಚ್ಚುಗೆ ಇದೆ, ಏಕೆಂದರೆ ನಿಮಗೆ ಜವಾಬ್ದಾರಿ ಇದೆ. 40 ಜನರ ಭಾವನೆಗಳನ್ನು ನೀವು ಸ್ಪಂದಿಸಬೇಕು. ನಾಯಕರಾಗಿ ಅವರೆಲ್ಲರಿಗೂ ನೀವು ಅವಕಾಶವನ್ನು ಕೊಡಬೇಕು, ಇಲ್ಲ ಎಂದರೆ, ನಿಮ್ಮ ಪಕ್ಷದ ಶಾಸಕಾಂಗ ಸಭೆಯಲ್ಲಿ ನೀವು ಅವರಿಗೆ ಉತ್ತರಿಸಬೇಕಾಗುತ್ತದೆ. ಆದರೆ ಬೇರೆಯವರಿಗೆ ಆ ಜವಾಬ್ದಾರಿ ಇಲ್ಲ. ಹಾಗಾಗಿ ಅವರು ಬೆಲ್ಲಾಟಕ್ಕೆ ಇಳಿಯುತ್ತಾರೆ. ಅದು ಆಗಬಾರದು ಎಂದು ನಾನು ಹೇಳುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಾವು ಏನು ನಮಗೆ ಅವಕಾಶವನ್ನು ಕೊಡುತ್ತೀರಿ ಅದರ ಬಗ್ಗೆ ನಮ್ಮದು ಏನೂ ಅಭ್ಯಂತರವಿಲ್ಲ. ಆದರೆ ಅತ್ಯಂತ ಪ್ರಮುಖವಾದಂತಹ ವಿಷಯ ಮತ್ತೊಮ್ಮೆ ಗೊಂದಲಕ್ಕೆ ಎಡೆಮಾಡಿರುವುದರಿಂದ ಕಾವೇರಿ ಮತ್ತು ಕೃಷ್ಣಾ ವಿಷಯ ಪ್ರಸ್ತಾಪಿಸುವುದು ಅನಿವಾರ್ಯವಾಯಿತು. ನೀವೂ ಸಹ ವಿರೋಧ ಪಕ್ಷದಲ್ಲಿ ಕುಳಿತುಕೊಂಡಿದ್ದರೆ ಇದನ್ನೇ ಅನಿವಾರ್ಯವಾಗಿ ಮಾಡಬೇಕಾಗಿತ್ತು. ಅದಕ್ಕೆ ನಮ್ಮದು ಏನೂ ಅಭ್ಯಂತರವಿಲ್ಲ. ಆದರೆ ಅದಕ್ಕೆ ಇತಿ ಮಿತಿ ಇದೆ. ಅದನ್ನು ನಾನು ಒಪ್ಪುತ್ತೇನೆ.

(3) ವಿತ್ತೀಯ – ಕಾರ್ಯಕಲಾಪಗಳು

(ಅ) ಪೂರಕ ಅಂದಾಜುಗಳು, 1996-97 (ಮೊದಲನೇ ಕಂತು) ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೆ, ಭಾರತದ ಸಂವಿಧಾನದ 205ನೇ (1) ಅನುಚ್ಛೇದದ ಮೇರೆಗೆ, 1996-97ನೇ ಸಾಲಿಗೆ ಸಂಬಂಧಿಸಿದ ಪೂರಕ ಅಂದಾಜುಗಳನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ, 1996-97ನೇ ಸಾಲಿನ ಪೂರಕ ಅಂದಾಜುಗಳ (ಪ್ರಥಮ ಕಂತು) ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಅಧ್ಯಕ್ಷರು :ನೀವು ದಿವಸ ಇದನ್ನೇ ಮಾಡಬೇಕು ಎನ್ನುತ್ತೀರೋ? ಕೃಷ್ಣಾ, ಕಾವೇರಿ ವಿಚಾರವನ್ನು ತೆಗೆದುಕೊಳ್ಳಬೇಕೇ? ಅಸೆಂಬ್ಲಿಯಲ್ಲಿ ಬೇರೆ ವ್ಯವಹಾರವನ್ನು ನಡೆಸುವುದು ಬೇಡವೇ? ಅದಕ್ಕಾಗಿ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ಇವತ್ತು ವಿರೋಧ ಪಕ್ಷಗಳ ಬಗ್ಗೆ ತಾರತಮ್ಯವನ್ನು ವಹಿಸಿದ್ದಂತಹ ಸರ್ಕಾರದ ನೀತಿಯನ್ನು ಪ್ರತಿಭಟಿಸಿ ನಾವುಗಳು ಸಭಾತ್ಯಾಗವನ್ನು ಮಾಡುತ್ತೇವೆ.

(ಈ ಹಂತದಲ್ಲಿ ಶ್ರೀಯುತರಾದ ಯು.ಆರ್. ಸಭಾಪತಿಯವರು ಸಭಾತ್ಯಾಗವನ್ನು ಮಾಡಿದರು)

2. ಶಾಸನಾ ರಚನಾ ಕಾರ್ಯಕಲಾಪಗಳು ವಿಧೇಯಕಗಳ ಮಂಡನೆ

(ಅ) ಕರ್ನಾಟಕ ಪಂಚಾಯತ್‌ರಾಜ್(ಎರಡನೇಯ ತಿದ್ದುಪಡಿ)ವಿಧೇಯಕ 1996, (ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಗ್ರಾಮೀಣಾಭಿವೃದ್ಧಿ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 1996ರ ಕರ್ನಾಟಕ ಪಂಚಾಯತ್ ರಾಜ್ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, " 1996ರ ಕರ್ನಾಟಕ ಪಂಚಾಯತ್ ರಾಜ್ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿಯನ್ನು ನೀಡಲಾಯಿತು

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಗ್ರಾಮೀಣಾಭಿವೃದ್ಧಿ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 1996ರ ಕರ್ನಾಟಕ ಪಂಚಾಯತ್ ರಾಜ್ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಯಿತು.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರವನ್ನು ಬಲಿ ಕೊಡುತ್ತಿದ್ದಾರೆ, ಇದು ಒಳ್ಳೆಯ ನೀತಿಯಲ್ಲ, ಕೇಂದ್ರ ಸರ್ಕಾರವನ್ನು ಉಳಿಸುವುದಕ್ಕೆ, ಕರ್ನಾಟಕ ಸರ್ಕಾರದ ತಂತ್ರ ಇದು. ಕೇಂದ್ರ ಸರ್ಕಾರಕ್ಕೆ ಧಿಕ್ಕಾರವಿರಲಿ, ಆಂಧ್ರ ಪ್ರದೇಶದ ಸರ್ಕಾರಕ್ಕೆ ಧಿಕ್ಕಾರವಿರಲಿ, ಕರ್ನಾಟಕವನ್ನು ಕಡೆಗಣಿಸುತ್ತಿರುವಂತಹ ಸರ್ಕಾರಕ್ಕೆ ಧಿಕ್ಕಾರವಿರಲಿ, ಕೇಂದ್ರದಲ್ಲಿ ಕುರ್ಚಿಯನ್ನು ಉಳಿಸುವಂತಹ ತಂತ್ರವಿದು.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್ ಸಭಾತ್ಯಾಗವನ್ನು ಮಾಡಿದರು)

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರೆ, ನಾನು ಏನು ಹೇಳುವುದೆಂದರೆ, ತಾವು ನನ್ನ ಜೊತೆಯಲ್ಲಿ ಸಹಕರಿಸಿದ್ದೀರಿ, ಕಾವೇರಿ, ಕೃಷ್ಣಾ ಇವು ನಮ್ಮ ಜೀವನದಿಗಳು ಈ ಸಾರಿ ಅಧಿವೇಶನ ಪ್ರಾರಂಭವಾದ ಮೇಲೆ ಒಂದಲ್ಲ ಒಂದು ರೂಪದಲ್ಲಿ ಇದನ್ನು ಬಿಟ್ಟು ಬೇರೆ ಯಾವುದೇ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳದೇ ಹೋದರೆ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿ) : 1996-97ನೇ ಸಾಲಿಗೆ ಸಂಬಂಧಿಸಿದ ಪೂರಕ ಅಂದಾಜುಗಳನ್ನು (ಮೊದಲನೇ ಕಂತು) ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ ಕ್ಷೇತ್ರ) : ಮಾನ್ಯ ಸಭಾಧ್ಯಕ್ಷರೆ, ಈ ಸರ್ಕಾರ ರಾಜ್ಯ ಮಟ್ಟದ ಒಂದು ಗಂಭೀರವಾದಂತಹ ಸಮಸ್ಯೆಯು ಬಂದರೆ, ಸಂಖ್ಯೆಯ ಬಲದ ಮೇಲೆ ಕೆಲವರನ್ನೇ ವಿರೋಧ ಪಕ್ಷವೆಂದು ತೀರ್ಮಾನವನ್ನು ಮಾಡುತ್ತಿರಾ ಹೇಗೇ? ಏತಕ್ಕೆಂದರೆ ಇಲ್ಲಿರತಕ್ಕಂತಹ ಬೇರೆ ಬೇರೆ ಪಕ್ಷಗಳನ್ನು ಸಹ ವಿರೋಧ ಪಕ್ಷವೆಂದು ತಾವು ತೀರ್ಮಾನವನ್ನು ಮಾಡಿದ್ದೀರಿ. ಈ ರಾಜ್ಯದ ಹಿತ ಬಂದಾಗ ಎಲ್ಲಾ ವಿರೋಧ ಪಕ್ಷಗಳು ಆಡಳಿತ ಪಕ್ಷಕ್ಕೆ ಸೇರಿದಂತಹ ಸಂಬಂಧದ ವಿಷಯದಲ್ಲಿ, ಆಲಮಟ್ಟಿಯ ವಿಷಯದಲ್ಲಿ ಸರ್ಕಾರ ಈ ತರಹ ಶಿಷ್ಟಚಾರ ಇಲ್ಲದ ಕಾರ್ಯಕ್ರಮ, ನಾವು ಸಭೆಗೆ ಬರುತ್ತಿದ್ದೆವೋ ಬಿಡುತ್ತಿದ್ದೆವೋ ಅದು ಎರಡನೇ ವಿಷಯ. ಬೇರೆ ವಿರೋಧ ಪಕ್ಷಗಳನ್ನು ಏನು ಎಂದು ಸರ್ಕಾರದವರು ತಿಳಿದಿದ್ದಾರೆ? ಅದು ಸದನದಲ್ಲಿ ತೀರ್ಮಾನವಾಗಬೇಕು. ಸಂಖ್ಯೆ ಬಲದಿಂದ ವಿರೋಧ ಪಕ್ಷಗಳು, ಬೇರೆಯವು ವಿರೋಧ ಪಕ್ಷ ಅಲ್ಲ ಎಂದರೆ, ಅವರ ಯಾವುದೇ ಸಭೆಗಳಿಗೆ ನಾವುಗಳು ಹೋಗದೇ ಇರತಕ್ಕಂಥದ್ದನ್ನು ನಾವು ಬೆಳೆಸಿಕೊಳ್ಳುವುದು ಒಳ್ಳೆಯದು. ಅದರ ಬಗ್ಗೆ ಸರ್ಕಾರ ಉತ್ತರವನ್ನು ಕೊಡಬೇಕು.

ಶ್ರೀ ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಅವರು ಊಟವನ್ನು ಮಾಡಿದರೆ, ನಾವು ಊಟವನ್ನು ಮಾಡಿದ ಹಾಗೆ ಆಗುತ್ತದೆಯೇ? ಇವರೆಲ್ಲರೂ ಊಟವನ್ನು ಮಾಡಲಿ, ನಾವು ಸಹ ಊಟವನ್ನು ಮಾಡಿದ್ದೇವೆಂದು ತಿಳಿದುಕೊಳ್ಳುತ್ತೇವೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಕೆ.ಎಸ್‌ಯ ಪುಟ್ಟಣ್ಣಯ್ಯನವರೇ, ಒಂದು ಮಾತು ಹೇಳುತ್ತೇನೆ. ಪ್ರಧಾನಿಗಳು ಕರೆದಿರತಕ್ಕಂತಹ ಸಭೆಯಲ್ಲಿ, ನಿಮ್ಮನ್ನು ಕರೆದುಕೊಂಡು ಹೋಗಬಾರದು ಎನ್ನುವ ದುರುದ್ದೇಶ ಖಂಡಿತವಾಗಿಯೂ ನಮಗೆ ಇಲ್ಲ. ನಾವು ಪ್ರತಿಯೊಂದು ಸಂದರ್ಭದಲ್ಲಿಯೂ ಕೂಡ ನಿಮ್ಮೆಲ್ಲರನ್ನು ಕರೆದು ಕೂರಿಸಿ ಕೊಂಡೇ ಚರ್ಚೆಯನ್ನು ಮಾಡಿಯೇ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಆದರೆ ಈ ಒಂದು ಸಭೆಯನ್ನು ತುರ್ತಾಗಿ ಕರೆದಿರತಕ್ಕಂತಹ ಈ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರನ್ನು ಮತ್ತು ಶ್ರೀಮಾನ್ ಎಂ. ಮಲ್ಲಿಕಾರ್ಜುನ ಖರ್ಗೆಯವರನ್ನು ಇದಕ್ಕೆ ಸಂಬಂಧಪಟ್ಟ ಹಾಗೆ ಬನ್ನಿ ಎಂದು ಆಹ್ವಾನಿಸಿದ್ದಾರೆ. ನಿಮ್ಮನ್ನು ಕರೆದಿಲ್ಲ ಎಂದರೆ ನಿಮ್ಮನ್ನು ಬಿಟ್ಟು ಏನಾದರೂ ಮಾಡಬೇಕು ಎಂದು ಏನೂ ಇಲ್ಲ, ದಯವಿಟ್ಟು ತಾವು ಅನ್ಯಥಾ ಭಾವಿಸಬೇಡಿ ಎನ್ನುವಂತಹ ಮಾತನ್ನು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಯನ್ನು ಪಡುತ್ತೇನೆ.

10.50 ಎ.ಎಂ

(ಆ) 1996-97ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ

+ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ಈಗಾಗಲೇ 19 ಬೇಡಿಕೆಗಳಿಗೆ ಹೇಗೋ, ಏನೋ ಅನುಮತಿಯನ್ನು ಪಡೆದುಕೊಂಡಿದ್ದಾಯಿತು. ಉಳಿದಿರತಕ್ಕ ಸುಮಾರು 41 ಬೇಡಿಕೆಗಳನ್ನು ಮತಕ್ಕೆ ಹಾಕತಕ್ಕದ್ದು, ಆ ಬಗ್ಗೆ ಚರ್ಚೆ ಪ್ರಾರಂಭ ಆಗಬೇಕಾಗಿದೆ ನಾನು ಅನಿವಾರ್ಯವಾಗಿ ಈ ಬೇಡಿಕೆಗಳಿಗೆ ಅನುಮೋದನೆಯನ್ನು